ನಟಿಸಲು ಸಾಧ್ಯವಾಗಲಿಲ್ಲ. ಲಾಕ್‌ಡೌನ್ ಮುಗಿಯುತ್ತಿದ್ದಂತೆ 'ಪದವಿಪೂರ್ವ' ಸಿನಿಮಾ ಸಿದ್ಧತೆಗಳು ಆರಂಭವಾಗಿದ್ದವು. ನಿರ್ದೇಶಕ ಹರಿಪ್ರಸಾದ್ ಜಯಣ್ಣ ಸಿನಿಮಾಗೆ ನಟಿಯ ಹುಡುಕಾಟದಲ್ಲಿದ್ದರು. ಹರಿಪ್ರಸಾದ್ ಅವರನ್ನು ಭೇಟಿ ಮಾಡಿ ಕಥೆ ಕೇಳಿದ ನಂತರ ಸಿನಿಮಾಗೆ ಖುಷಿಯಿಂದ ಒಪ್ಪಿಗೆ ಸೂಚಿಸಿದ್ದರು.

'ನಾನು ಕಾಲೇಜಿನಲ್ಲಿ ಪಿಯುಸಿ ಮಾಡಿಲ್ಲ. ನನ್ನ ಜೀವನದಲ್ಲಿ 'ಪದವಿಪೂರ್ವ' ಇಲ್ಲ, ಆದರೆ ಸಿನಿಮಾದಲ್ಲಿಯೇ ಆ ಅನುಭವಗಳನ್ನು ಪಡೆದುಕೊಂಡೆ' ಎನ್ನುವ ಅಂಜಲಿ, ಪದವಿಪೂರ್ವ ಸಿನಿಮಾದಲ್ಲಿನ ತಮ್ಮ ಪಾತ್ರಕ್ಕೂ ತಮಗೂ ಸಾಮ್ಯತೆ ಇರುವುದಾಗಿ ಹೇಳುತ್ತಾರೆ. 'ನನಗೆ ಕಥೆ ತುಂಬಾ ಇಷ್ಟವಾಯಿತು. ತಾಜಾ ಕಥೆ, ಪಾತ್ರಗಳಿವೆ. ನಾಸ್ಟಾಲ್ಜಿಕ್ ಭಾವ ತರುವಂಥ ಕಥೆ. ಸಿನಿಮಾದಲ್ಲಿ ಹಲವು ಟ್ವಿಸ್ಟ್‌ಗಳಿವೆ. ಆ ಟ್ವಿಸ್ಟ್‌ಗಳನ್ನು ಕೇಳಿಯೇ ನನಗೆ ಇಷ್ಟವಾಯಿತು. 90ರ ದಶಕದವರಿಗೆ ಖಂಡಿತ ಈ ಸಿನಿಮಾ ಹಲವು ನೆನಪುಗಳನ್ನು ಕೆದಕುತ್ತದೆ. ಅಂಥ ಖುಷಿ ಕೊಡುವ ಸಾಕಷ್ಟು ಸಂಗತಿಗಳು ಸಿನಿಮಾದಲ್ಲಿವೆ' ಎನ್ನುತ್ತಾರೆ.



'ಪದವಿಪೂರ್ವ' ಸಿನಿಮಾದಲ್ಲಿ ನಟಿಸುತ್ತಿದ್ದ ಸಮಯದಲ್ಲೇ, ನಿರ್ದೇಶಕ ಎಂ.ಡಿ. ಶ್ರೀಧರ್ ಅವರ ಸಿನಿಮಾದಲ್ಲಿ ನಟಿಸುವ ಮತ್ತೊಂದು ಅವಕಾಶ ಅಂಜಲಿಗೆ ದಕ್ಕಿತು. 'ಪದವಿಪೂರ್ವ' ಸಿನಿಮಾ ಇದೇ ಡಿ.30ಕ್ಕೆ ತೆರೆಕಾಣಲಿದ್ದು, ಶ್ರೀಧರ್ ಅವರ ಸಿನಿಮಾ ಬಿಡುಗಡೆಯ ತಯಾರಿಯಲ್ಲಿದೆ.

'ನನ್ನ ಮುಂದೆ ಒಳ್ಳೆ ಅವಕಾಶಗಳು ಬಂದರೆ ಖಂಡಿತ ನಾನು ಕಳೆದುಕೊಳ್ಳುವುದಿಲ್ಲ. ನನ್ನ ಪ್ರಕಾರ ಬದುಕು, ಒಂದಕ್ಕೇ ಒಗ್ಗಿಕೊಂಡುಬಿಡಬಾರದು. ಇಷ್ಟು ದೊಡ್ಡ ಬದುಕಿನಲ್ಲಿ ಒಂದೇ ಆಸಕ್ತಿ ಇರಬೇಕೆಂದಿಲ್ಲ. ಮನಸ್ಸಿಗೆ ಖುಷಿ ಆದದ್ದನ್ನು ಮಾಡುತ್ತಾ ಸಾಗುತ್ತೇನೆ. ಅದಕ್ಕೆ ಯಾವುದೇ ಬೇಲಿ ಇಲ್ಲ' ಎನ್ನುತ್ತಾರೆ.

ಮನೆಯಲ್ಲಿ ಅಪ್ಪ, ಅಮ್ಮ, ಅಣ್ಣ ಎಲ್ಲರೂ ಕಾನೂನು ಕ್ಷೇತ್ರದವರಾದ್ದರಿಂದ ತಮಗೂ ಕಾನೂನಿನ ಕುರಿತು ಮೊದಲಿನಿಂದ ಆಸಕ್ತಿ ಸಹಜವಾಗಿಯೇ ಇದ್ದುದಾಗಿ ತಿಳಿಸುತ್ತಾರೆ. ಸದ್ಯ ಕಾನೂನು ವಿಷಯದಲ್ಲಿ ಅಂತಿಮ ವರ್ಷ ವ್ಯಾಸಂಗ ಮಾಡುತ್ತಿದ್ದಾರೆ.

ಸಿನಿಮಾ ಕ್ಷೇತ್ರಕ್ಕೆ ಯಾವುದೇ ಹಿನ್ನೆಲೆಯಿಲ್ಲದೆ ಬಂದು ನೆಲೆ ಕಂಡುಕೊಳ್ಳುವುದು ದೊಡ್ಡ ಸವಾಲು ಎನ್ನುವುದು ಇವರ ಅನಿಸಿಕೆ. 'ನಾನು ಸಿನಿಮಾ ಕ್ಷೇತ್ರಕ್ಕೆ ಪೂರ್ತಿ ಹೊರಗಿನವಳಾಗಿದ್ದೆ. ಹೊರಗಿನವರಾಗಿದ್ದಾಗ ಕಷ್ಟವೂ ಎರಡುಪಟ್ಟು ಹೆಚ್ಚಿರುತ್ತದೆ. ಮಾಡೆಲಿಂಗ್, ಸಿನಿಮಾ ರಂಗದ ಟ್ರಯಲ್‌ನಂತಿತ್ತು. ಮಾಡೆಲಿಂಗ್ ನನಗೆ ಶಿಸ್ತನ್ನು ಕಲಿಸಿತು. ನಟನೆಯಲ್ಲಿಯೂ ಅದೇ ಶಿಸ್ತನ್ನು ಕಾಪಾಡಿಕೊಳ್ಳುತ್ತಿದ್ದೇನೆ. ಹೊಸಬರಿಗೆ ಮನ್ನಣೆ ನೀಡುತ್ತಿರುವುದು ಖುಷಿ ವಿಷಯ' ಎನ್ನುತ್ತಾರೆ.

ನಟನೆಗೆ ಬರುವ ಮುನ್ನ ಸಾಕಷ್ಟು ಸಿದ್ಧತೆಗಳನ್ನು ಮಾಡಿಕೊಂಡಿರುವುದಾಗಿ ಹೇಳುತ್ತಾರೆ ಅಂಜಲಿ. ಹಾರ್ಸ್ ರೈಡಿಂಗ್, ಭರತನಾಟ್ಯ, ಕಥಕ್ ಹಾಗೂ ಬ್ಯಾಲೆ ನೃತ್ಯ ಕಲಿತಿದ್ದಾರೆ. ಸಿನಿಮಾ ಅವಕಾಶ ಸಿಕ್ಕಾಗ ಯಾವುದೋ ಚಿಕ್ಕ ಕಾರಣಕ್ಕೆ ನಿರಾಕರಿಸುವ ಪ್ರಸಂಗ ಬರಬಾರದು ಎನ್ನುವ ಅವರು, ಇದೇ ದೃಷ್ಟಿಯಿಂದ ತೆಲುಗು, ತಮಿಳು ಭಾಷೆಗಳನ್ನು ಕಲಿಯುತ್ತಿದ್ದಾರೆ. ಪ್ರತಿಭೆಗೆ ಭಾಷೆಯ ಬೇಲಿಯೇಕೆ ಎಂದು ಪ್ರಶ್ನಿಸುತ್ತಾರೆ.

ವ್ಯಕ್ತಿ ಕೇಂದ್ರಿತ ಅಥವಾ ಪಾತ್ರಾಧಾರಿತ ಸಿನಿಮಾದಲ್ಲಿ ನಟಿಸಬೇಕೆಂಬುದು ಅಂಜಲಿ ಅವರ ಆಸೆ. 'ನಾನೇ ಪ್ರಮುಖ ಪಾತ್ರವಾಗಿರುವಂಥ ಭಿನ್ನ ಸಿನಿಮಾ ಮಾಡಬೇಕು. 'ಗಂಗೂಬಾಯಿ', 'ಪದ್ಮಾವತ್'ನಂಥ ಸಿನಿಮಾದಲ್ಲಿ ನಟಿಸಬೇಕು ಎನ್ನುವ ಆಸೆಯಿದೆ. ಪ್ರೇಕ್ಷಕರು ಕಥೆಯಲ್ಲಿ ನಂಬಿಕೆಯಿಟ್ಟು ಬರುವುದು ಮುಖ್ಯ. ಅಂಥದ್ದೊಂದು ಚಿತ್ರದಲ್ಲಿ ನಟಿಸಬೇಕು. ನನ್ನದೇ ನಟನೆ, ನಿರ್ದೇಶನ ಎರಡೂ ಇರುವ ಸಿನಿಮಾ ಮಾಡುವ ಕನಸಿದೆ. ಬರೀ ಹುಡುಗರೇ ಏಕೆ? ಹುಡುಗಿಯರಿಗೂ ಸಿನಿ ರಂಗದಲ್ಲಿ ಹಲವು ಸಾಧ್ಯತೆಗಳಿವೆ. ಅಂಥ ಅವಕಾಶ ಬಂದರೆ ಖಂಡಿತ ಉತ್ತಮವಾಗಿ ಬಳಸಿಕೊಳ್ಳುತ್ತೇನೆ' ಎಂದು ಆತ್ಮವಿಶ್ವಾಸದಿಂದ ನುಡಿಯುತ್ತಾರೆ. ■

# ಚಿಕ್ಕಮಗಳೂರ ಚಿಕ್ಕಮಲ್ಲಿಗೆ

ಶಿವರಾಜ್‌ಕುಮಾರ್ ನಟನೆಯ 'ವೇದ' ಚಿತ್ರದ ಬಿಡುಗಡೆಗೆ ದಿನಗಣನೆ ಆರಂಭವಾಗಿದೆ. ಶಿವರಾಜ್ ನಟನೆಯ 125ನೇ ಸಿನಿಮಾ ಎನ್ನುವುದು 'ವೇದ'ದ ವಿಶೇಷ. ಏನಿದು ವೇದ? ಚಿತ್ರದ ನಾಯಕಿ ಗಾನವಿ ಹೇಳುತ್ತಾರೆ: 'ವೇದ ಎಂದರೆ ಒಂದು ಶಕ್ತಿ ಎಂದರ್ಥ. ಪುರುಷ ಹಾಗೂ ಮಹಿಳೆಯ ಶಕ್ತಿಯ ಅನಾವರಣವೇ ವೇದ'.

ಗಾನವಿ ಅಪ್ಪಟ ಕನ್ನಡದ ಹುಡುಗಿ. ಚಿಕ್ಕಮಗಳೂರಿನ ಚಿಕ್ಕಮಲ್ಲಿಗೆ. ಕಿರುತೆರೆಯ 'ಮಗಳು ಜಾನಕಿ' ಧಾರಾವಾಹಿಯ ಮೂಲಕ ಜನಪ್ರಿಯರಾದವರು. ಸೈಕಾಲಜಿ ಮತ್ತು ಕ್ರಿಮಿನಾಲಜಿಯಲ್ಲಿ ಪದವೀಧರೆ. ರಿಷಭ್ ಶೆಟ್ಟಿಯ 'ಹೀರೊ', ಗಾನವಿ ನಾಯಕಿಯಾಗಿ ನಟಿಸಿದ ಮೊದಲ ಸಿನಿಮಾ. ಕೆಲವು ಕಿರುಚಿತ್ರಗಳಲ್ಲೂ ನಟಿಸಿದ್ದಾರೆ. ಇಷ್ಟೆಲ್ಲ ಆದರೂ ಗಾನವಿಯನ್ನು ಜನ ಗುರ್ತಿಸುವುದು 'ಮಗಳು ಜಾನಕಿ'ಯ ರೂಪದಲ್ಲೇ.

'ವೇದ' ಸಿನಿಮಾ ಗಾನವಿ ಅವರ ವರ್ಚಸ್ಸನ್ನು ಬದಲಿಸುವುದೇ? ಆ ವಿಶ್ವಾಸವಂತೂ ಅವರ ಮಾತುಗಳಲ್ಲಿ ಕಾಣಿಸುತ್ತಿದೆ. ಶಿವರಾಜ್ ಜೊತೆ ನಟಿಸಿರುವುದು ಅವರಿಗೆ ಖುಷಿ ಕೊಟ್ಟಿದೆ, ಪಾಠವಾಗಿಯೂ ಪರಿಣಮಿಸಿದೆ. ಗೀತಾ–ಶಿವರಾಜ್ ದಂಪತಿಯ ಚಿತ್ರತಂಡದಲ್ಲಿ ಕೆಲಸ ಮಾಡುವುದು ಆಶೀರ್ವಾದ ಅನ್ನಿಸಿದೆ. ಚಿತ್ರದ ಕಥೆಯ ಬಗ್ಗೆ ಅವರಿಗೆ ಅಪಾರ ವಿಶ್ವಾಸವಿದೆ. ನಿರ್ದೇಶಕ ಎ. ಹರ್ಷ ಅವರು ಕಥೆ ಹೇಳಿದಾಗ, ಆ ಕಥೆಯನ್ನು ಒಪ್ಪಿಕೊಳ್ಳದಿರಲು ಅವರಲ್ಲಿ ಕಾರಣಗಳೇ ಇರಲಿಲ್ಲವಂತೆ. ಕಲಾವಿದೆಯೊಬ್ಬಳು ಹಂಬಲಿಸಿ ಮಾಡುವಂಥ ಪಾತ್ರ ತಮಗೆ ದೊರೆತಿದೆ ಎನ್ನುವ ವಿಶ್ವಾಸ ಅವರದು. ■

